ಕರಗಿ ಅದು ಪ್ರೀತಿಯಾಗಿ ಪರಿವರ್ತನೆಯಾಗಿರಬೇಕು ಎಂದು ನನಗೆ ಅನಿಸತೊಡಗಿತು. ಒಂದೆರಡು ಬಾರಿ ಆಕೆಯ ಪಾದ ನನ್ನ ಪಾದಗಳನ್ನು ಸ್ಪರ್ಶಿಸಿತು. ಆಗ ಆಕೆ ಗಾಬರಿಯಾಗಿ 'ಸ್ಸಾರಿ ಸರ್' ಎಂದು ನನ್ನ ಕೈಯನ್ನು ಮುಟ್ಟಿ ನಮಸ್ಕರಿಸಿದಳು. ನಾನು 'ಡೋಂಟ್ ಮೈಂಡ್' ಎಂದು ಹೇಳಿದೆ. ಆದರೆ ನನ್ನ ಒಳಗೂ ನನ್ನನ್ನು ಈಕೆ ಸ್ಪರ್ಶಿಸಿದರೆ ಸ್ಪರ್ಶಿಸಲಿ ಎಂಬ ಭಾವ ಬೆಳೆಯುತ್ತಿದ್ದುದು ನಿಧಾನವಾಗಿ ನನ್ನ ಗಮನಕ್ಕೂ ಬಂತು. ಅದು ಸರೋಜಾಳಿಗೆ ತಿಳಿದಿರಬಹುದೇ ಎಂದು ನಾನೂ ಪ್ರಶ್ನಿಸಿಕೊಂಡೆ. ಆಮೇಲೆ ಒಮ್ಮೆ ನಿಧಾನವಾಗಿ ಆಕೆ ನನ್ನ ಕಾಲನ್ನು ತನ್ನ ಕಾಲ ಮೇಲೆ ತಂದುಕೊಂಡಾಗ ನಾನು 'ಬೇಡ' ಅನ್ನಲಿಲ್ಲ. ಸುಮ್ಮನಿದ್ದೆ. ಪರಸ್ಪರ ಮೇಜಿನ ಇದಿರು ಕುಳಿತುಕೊಂಡು ಟ್ಯೂಶನ್ ನಡೆಯುತ್ತಿದ್ದರೂ ನಮ್ಮಿಬ್ಬರ ಕಾಲುಗಳು ಪರಸ್ಪರ ಸ್ಪರ್ಶಿಸುವುದು ಮುಂದುವರಿಯುತ್ತಾ ಹೋಗತೊಡಗಿತು. ಕೊನೆಗೊಮ್ಮೆ ನಾನು ಸರೋಜಾಳ ಕೆನ್ನೆ ಚಿವುಟಿ 'ಎಷ್ಟು ಸುಂದರವಾಗಿದ್ದೀಯೆ ನೀನು!' ಎನ್ನುವಲ್ಲಿಗೆ ಅದು ಬಂದು ಮುಟ್ಟಿತು.

ಸರೋಜಾಳಿಗೆ ಈ ನಿರೀಕ್ಷೆ ಇತ್ತು. ಅದನ್ನು ಅವಳು ಬಯಸಿಯೂ ಇದ್ದಳು. ನನ್ನ ಬಾಯಿಯಿಂದ 'ತಾನು ಸುಂದರಿ' ಎಂಬ ಶಿಫಾರಸ್ಸು ಪಡೆದ ತಕ್ಷಣ ಆಕೆಯೂ ಸುಮ್ಮನಿರಲಿಲ್ಲ. 'ಸರ್, ನಿಮ್ಮ ಬಗ್ಗೆ ನನ್ನ ಸ್ನೇಹಿತೆಯರು ಏನೆನ್ನುತ್ತಾರೆ ಗೊತ್ತಾ?' ಎಂದು ನನ್ನ ಕಣ್ಣಲ್ಲಿ ಕಣ್ಣಿಟ್ಟು ಪ್ರಶ್ನಿಸಿದಳು.

'ಏನು ಹೇಳುತ್ತಾರೆ?'

'ನಾನು ತುಂಬಾ ಲಕ್ಕೀ ಅನ್ನುತ್ತಾರೆ ಸರ್. ಅಷ್ಟೇ ಅಲ್ಲ, ನಿಮ್ಮ ಇಂಗ್ಲಿಷ್ ಪಾಠದ ಹಾಗೆ ನಿಮ್ಮ ಪರ್ಸನಾಲಿಟಿಯೂ ತುಂಬಾ ಚೆಂದ ಎನ್ನುವುದು ಎಲ್ಲರ ಅಭಿಪ್ರಾಯ'.

'ಇರಬಹುದು. ಬಟ್ ನಿನ್ನ ಅಭಿಪ್ರಾಯ ಏನು?'

'ನಾನೂ ಹೇಳೋದು ಅದನ್ನೇ ಸರ್. ಐ ಆಮ್ ಮೋಸ್ಟ್ ಲಕ್ಕೀ'.

'ಯಾಕೆ?'

'ನನ್ನ ಕಣ್ಣು ಹೇಳ್ತಿಲ್ಲವಾ ಸರ್, ಗೊತ್ತಾಗಿದೆ ನಿಮಗೆ ಕೂಡಾ!'

ಸರೋಜ ಸಣ್ಣಗೆ ಕುಲುಕುಲು ನಕ್ಕಳು. ನನಗೆ ಅವಳ ಕೆನ್ನೆ ಹಿಂಡಬೇಕು ಅನಿಸಿತು. ಅಷ್ಟರಲ್ಲಿ ಟ್ಯೂಶನ್ ನಡೆಯುವ ರೂಮಿಗೆ ಯಾವತ್ತೂ ಬಾರದೇ ಇದ್ದ ವೆಂಕಮ್ಮ ಹೆಜ್ಜೆ ಹಾಕುತ್ತಾ ಬರುವ ಹಾಗೆ ಅನಿಸಿ, 'ಯಾಕೆ ಸುಮ್ಮನೆ ನಗುತ್ತಿ? ನಾನು ಬಯ್ಯುವುದಿಲ್ಲ ಅಂತನಾ? ಇಟ್ ಈಸ್ ಟೂ ಬ್ಯಾಡ್. ಸಂಜೆ ಇದನ್ನೆಲ್ಲ ಕಲಿತು ಪಾಠ ಒಪ್ಪಿಸಬೇಕು' ಎಂದು ವೆಂಕಮ್ಮನ ಕಣ್ಣಿನಿಂದ ಪಾರಾದೆ.

ಆ ರಾತ್ರೆ ಸರೋಜಳಿಗೆ ನಿದ್ದೆಯೇ ಹತ್ತಿರಲಿಕ್ಕಿಲ್ಲ. ಅವಳ ಕಣ್ತುಂಬ ನನ್ನ ಕಣ್ಣು ಕಿವಿ ಮೂಗು ತುಟಿ ಎಲ್ಲವೂ ಜಾನಪದ ಗೀತೆಯಲ್ಲಿ 'ಚೆಂದವೋ ಚೆಂದ' ಎನ್ನುವ ಹಾಗೆ ತುಂಬಿರಬಹುದು ಎಂದು ತರ್ಕಿಸಿದೆ. ನನ್ನ ನಗು, ನಾನು ನಡೆಯುವ ರೀತಿ, ನಾನು ಮುಗುಳು ನಗುವಾಗ ಬಿರಿಯುವ ಹಲ್ಲು ಎಲ್ಲವೂ ಆಕರ್ಷಕವಷ್ಟೇ ಅಲ್ಲ, ತನ್ನದಾಗಬೇಕು ಎಂಬ ಆಸೆ ಅವಳಲ್ಲಿ ಮೂಡಿರಬಹುದು ಎಂದುಕೊಂಡೆ.

ಈ ನಡುವೆ ಅತ್ತ ಪೇಯಿಂಗ್ ಗೆಸ್ಟ್ ಆಗಿ ವಾಸುದೇವ ಕಾರಂತ ಎಂಬ ಬ್ರಾಹ್ಮಣನ ಮನೆಯಲ್ಲಿ ಇದ್ದ ನನಗೆ ಒಮ್ಮೆ ಕಾಕತಾಳೀಯವಾಗಿ ಎನ್ನುವಂತೆ ಕಾರಂತರು 'ನೀವು ಎಷ್ಟು ದಿನ ಒಬ್ಬಂಟಿಯಾಗಿ ನಮ್ಮಲ್ಲಿ ಇರುತ್ತೀರಿ ರಾಯರೇ? ನಿಮಗೆ ಅನ್ನ ಹಾಕುವುದು ನನಗೆ ಭಾರ ಅಂತ ಅಲ್ಲ. ನಿಮ್ಮಂಥ ಒಳ್ಳೆ ಯುವಕನ ಮದುವೆ ನೋಡಬೇಕೆಂಬ ಆಸೆ ನನಗಿದೆ' ಎಂದು ಊಟ ಬಡಿಸುವುದರ ನಡುವೆ ಆಡಿದ್ದರು. ಆಗ ನಾನು 'ಈಗ ಅವಸರ ಇಲ್ಲ ಕಾರಂತರೇ. ನೋಡೋಣ ಕಾಲ ಯಾವಾಗ ಕೂಡಿ ಬರುತ್ತೋ ಆಗ ಮದುವೆಯಾಗೋಣ' ಎಂದಿದ್ದೆ.

ಆ ದಿನ ತಡರಾತ್ರೆಯಾದರೂ ನನಗೆ ನಿದ್ದೆ ಬಾರದಿದ್ದಾಗ ನನ್ನ ಮನಸ್ಸಿನಲ್ಲಿ ಕಾಲ ಕೂಡಿ ಬಂತೇನೋ ಎಂದು ಹೊಳೆಯಿತು. ಅಷ್ಟೇ ಅಲ್ಲ, ಮದುವೆಯಾಗುವುದಾದರೆ ಬಂಟರ ಹುಡುಗಿಯಾದರೇನು, ಇವಳನ್ನೇ ಯಾಕೆ ಮದುವೆಯಾಗಬಾರದು? ಎಂದೂ ಅನಿಸಿತು.

'ನಿನಗೆ ಆ ಹುಡುಗಿ ಬೇಡ, ಈ ಹುಡುಗಿ ಬೇಡ ಎಂದೆನ್ನುವ ಬಂಧುಗಳು ನನಗೆ ಇರಲಿಲ್ಲ. ಕೊಪ್ಪರಿಗೆಯಲ್ಲಿ ಹೆಸರಿಗೊಂದು ಮನೆ, ನಾಲ್ಕು ತೆಂಗಿನಮರ, ಇಪ್ಪತ್ತೈದು ಅಡಿಕೆ ಗಿಡ ಬಿಟ್ಟರೆ ಇರುವುದು ಅಂದರೆ ಬರೇ ಸೊನ್ನೆ! ಆ ಮನೆಯ ಪಕ್ಕದ ತ್ಯಾಂಪಣ್ಣನಿಗೆ ನಾನು ಆ ಮನೆಯ ಉಸ್ತುವಾರಿ ನೋಡಿಕೋ ಎಂದು ಹೇಳಿ, 'ನೋಡು ಈ ಕಂಗು ತೆಂಗುಗಳಲ್ಲಿ ಬೆಳೆದದ್ದೆಲ್ಲ ನೀನೇ ಇಟ್ಟುಕೋ! ಬೇಕಾದರೆ ಇನ್ನೂ ನಾಲ್ಕು ಗಿಡ ಹಾಕು' ಎಂದು ಸುಮ್ಮನಿದ್ದೆ. ಊರಲ್ಲಿ ನನ್ನ ಸಮುದಾಯದವರದ್ದು ಅಂತ ಹೇಳುವ ವೆಂಕಟ್ರಾಯ ಮಾಷ್ಟ್ರ ಮನೆ ಒಂದಿದ್ದು ಆ ಮಾಷ್ಟ್ರಿಗೂ ಆಗ ಎಪ್ಪತ್ತಾಗಿರಬಹುದು. ಅವರಿಗೆ ಇದ್ದ ಒಬ್ಬಳೇ ಒಬ್ಬ ಮಗಳು ಮದುವೆಯಾಗಿ ಕೊಪ್ಪದಾಚೆ ಗಂಡನ ಮನೆಯಲ್ಲಿರುವುದಷ್ಟೇ ನನಗೆ ಗೊತ್ತು. ಸಣ್ಣವನಿದ್ದಾಗ ನನ್ನಮ್ಮ ಒಂದೆರಡು ಬಾರಿ ಆ ಮನೆಗೆ ನನ್ನನ್ನು ಕರೆದೊಯ್ದಿದ್ದಿದೆ. ಆಗ ಆ ಮನೆಯ ವೆಂಕಟ್ರಾಯ ಮಾಷ್ಟ್ರು 'ಒಳ್ಳೆ ಓದಬೇಕು ಮಾಣಿ. ನಮ್ಮಲ್ಲಿ ಓದುವವರ ಸಂಖ್ಯೆ ತುಂಬಾ ಕಡಿಮೆ' ಎಂದು ಹೇಳಿದ್ದು ಈಗಲೂ ನೆನಪಿದೆ. ಆಮೇಲೆ ಡಿಗ್ರಿ ಕ್ಲಾಸಿಗೆ ನಾನು ಸೇರುವಾಗ ಜಾತಿ ಸರ್ಟಿಫಿಕೇಟೋ ಬೇರೇನೋ ಬೇಕಾದಾಗ ಆ ಮಾಷ್ಟ್ರಲ್ಲಿಗೆ ಹೋಗಿ 'ಅದನ್ನು ಹೇಗೆ ಮಾಡಿಸುವುದು?' ಎಂದು ಕೇಳಿದ್ದೆ. ಆಗ ವೆಂಕಟ್ರಾಯ ಮಾಸ್ತ್ರು ಅದರ ವಿವರಗಳನ್ನೆಲ್ಲ ಹೇಳಿ 'ನಾವು ಮಾಲೆಯವರು ಅನ್ನುವ ಜಾತಿಯವರು ಮಗಾ. ಅತ್ತ ಬ್ರಾಹ್ಮಣರು ನಮ್ಮನ್ನು ಬ್ರಾಹ್ಮಣರಲ್ಲ ಎನ್ನುತ್ತಾರೆ. ಇತ್ತ ಶೂದ್ರರು ನಮ್ಮನ್ನು ಶೂದ್ರರಲ್ಲ ಅನ್ನುತ್ತಾರೆ. ನಾವು ಯಾರು? ಎಲ್ಲಿಂದ ಬಂದವರು? ಇತಿಹಾಸ ಏನು ಎನ್ನುವುದು ನನಗೆ ಬಿಡು, ನಮ್ಮ ಸಮುದಾಯದ ಮಂದಿಗೇ ಗೊತ್ತಿಲ್ಲ. ಹಿಂದೆ ದೇವಸ್ಥಾನಗಳಲ್ಲಿ ನಾವು ದೇವರಿಗೆ ಹೂ ಕಟ್ಟಿಕೊಡುವುದು, ಆರತಿಗೆ ಬತ್ತಿ ಹಾಕುವುದು ಇತ್ಯಾದಿ ಕೆಲಸದಲ್ಲಿದ್ದವರು ಎಂದು ಅಮ್ಮನಿಂದ ನಾನು ಕೇಳಿಬಲ್ಲೆ. ಮುದ್ದಣ ಎಂಬ ನಂದಳಿಕೆಯ ಒಬ್ಬ ಕವಿ ನಮ್ಮವನೇ ಆಗಿದ್ದವನಂತೆ. ಆತ ಸಾಯುವತನಕ ಪ್ರಸಿದ್ಧಿಗೆ ಬಾರದೇ ಸತ್ತ. ನಂತರ ಪಂಪ ರನ್ನರಿಗೆ ಸಮಾನ ಎಂಬಂತಾದದ್ದು ಮಾತ್ರ ನನಗೆ ಗೊತ್ತು.

ಇನ್ನು ಈಚೆಗೆ ಯು.ಆರ್. ಅನಂತಮೂರ್ತಿ ಎಂಬ ಸಾಹಿತಿಯೊಬ್ಬರು 'ಸಂಸ್ಕಾರ' ಎಂಬ ಕಾದಂಬರಿ ಬರೆದಿದ್ದು, ಅದರಲ್ಲಿ ಬ್ರಾಹ್ಮಣರ ಅವಹೇಳನ ಆಗಿದೆ ಎಂದು ರಂಪಾಟ ಆದದ್ದೂ ಗೊತ್ತು. ಆ ಕಾದಂಬರಿಯಲ್ಲಿ ಮಾಲೇರಪುಟ್ಟ ಎಂಬ ಪಾತ್ರ ಬರುತ್ತದಂತೆ. ಅವನು ನಮ್ಮ ಜಾತಿಯವನೆಂದು ಕೇಳಿದ್ದೆ. ಆದರೆ ಆ ಕಾದಂಬರಿ ಓದಿ ನನಗೇನಾಗಬೇಕು ಎಂದು ನಾನು ಸುಮ್ಮನಿದ್ದೆ. ಈ ಎರಡು ವಿಷಯ ಬಿಟ್ಟರೆ ನಮ್ಮ ಸಮುದಾಯದವರು ಇದ್ದೂ ಇಲ್ಲದಂತೆ ಇದ್ದೇವೆ ನೋಡು. ಇದು ದುಃಖದ ವಿಚಾರ. ಆದರೆ ನೀನು ಓದುವುದರಲ್ಲಿ ಜಾಣ ಇದ್ದಿ ಎಂದು ನನಗೆ ಗೊತ್ತು. ನೀನು ಓದಿ ಮುಂದೆ ಬಂದರೆ ನನಗೆ ಸಂತೋಷ. ಯಾಕೆಂದರೆ ನನ್ನನ್ನು ಬಿಟ್ಟರೆ ನಿನ್ನನ್ನು ಸಂತೋಷಪಡಿಸಲಿಕ್ಕೆ ಬೇರೆ ಯಾರಿದ್ದಾರೆ ಹೇಳು?' ಎಂದು ಅವರು ನನಗೆ ಹೇಳಿದ್ದರು.'

ನಾನು ಆ ರಾತ್ರೆ ಮೆಲ್ಲನೆ ಎದ್ದು ಕುಳಿತು ಇದೆಲ್ಲ ಯಾಕೆ ನೆನಪಾಗುತ್ತದೆ ಎಂದುಕೊಂಡು ಅಂತೂ ಇವಳು ನನ್ನ ತಲೆ ಹಾಳು ಮಾಡಿದ್ದಾಳೆ ಎಂದು ಕಣ್ಣು ಮುಚ್ಚಿ ಮಲಗಿದ್ದೆ. ಬೆಳಗ್ಗೆ ಆರಕ್ಕೇ ಏಳುವ ನಾನು ಆ ದಿನ ಗಂಟೆ ಏಳಾದರೂ ಏಳದ್ದು ನೋಡಿದ ಕಾರಂತರು, ಆರಕ್ಕೇ ಟೀ ಕೇಳುತ್ತಿದ್ದ ಈ ಮೇಷ್ಟ್ರು ಯಾಕೆ ಏಳಲಿಲ್ಲ ಎಂದು ಸಣ್ಣಗೆ ಬಾಗಿಲು ಬಡಿದಿದ್ದರು. ಆಗ ನಾನು ದಡಕ್ಕನೆ ಎದ್ದು ರೂಮಿನ ಬಾಗಿಲು ತೆರೆದು 'ಸ್ಸಾರಿ ಕಾರಂತರೇ, ರಾತ್ರೆ ಸ್ವಲ್ಪ ಓದಿದ್ದೆ. ಬೆಳಗ್ಗೆ ನಿದ್ರೆ ಆವರಿಸಿತು' ಎಂದಿದ್ದೆ.

ಮರುದಿನ ನಾನು ಟ್ಯೂಶನ್ನಿಗೆ ಹೋದಾಗ ಕೈಯಲ್ಲಿ ಕಾಫಿ ಹಿಡಿದು ಒಳಗೆ ಬಂದ ಸರೋಜಾ 'ಸರ್, ನೀವು ಒಂದು ಕಪ್ ಕಾಫಿಯಾದರೂ ಕುಡಿಯದಿದ್ದರೆ ನನ್ನಮ್ಮನಿಗೆ ನೆಮ್ಮದಿಯಿಲ್ಲ. ಪ್ಲೀಸ್ ಪ್ಲೀಸ್' ಎಂದು ಕೈಮುಂದೆ ಚಾಚಿದಳು. ನಾನು ಏನೂ ಆಡದೆ ಇದ್ದೆ. ಆದರೆ ನನ್ನ ಕೈ ಮುಂದೆ ಹೋಗಿ ಸರೋಜಾಳ ಮುಖವನ್ನು ನೋಡುತ್ತಾ ಒಂದೊಂದೇ ಸಿಪ್ ಕಾಫಿ ಹೀರಿತು. ಆಗ ನನಗೆ ಆಕೆ ನನ್ನನ್ನೇ ನೋಡುತ್ತ ಇದ್ದಾಳೆ ಎಂಬಂತಾಗಿ ಮುಗುಳ್ನಕ್ಕೆ. ಸರೋಜಾಳೂ ಮುಗುಳು ನಕ್ಕು 'ಥ್ಯಾಂಕ್ಯೂ ಸರ್' ಎಂದಳು. ಆಕೆ ಹಾಗೆ ಹೇಳುವಾಗ ಅವಳ ಕೆನ್ನೆ ಕೆಂಪಾಗಿದ್ದದ್ದನ್ನು ನೋಡಿ ನನ್ನ ಹೃದಯ ಅರಳಿತು. ನಾನು 'ನೋ ಮೆನ್ಶನ್' ಇತ್ಯಾದಿ ಏನೂ ಹೇಳದೆ, 'ಎಲ್ಲಿ ತೆಗಿ ನಿನ್ನ ಹೋಮ್‌ವರ್ಕ್' ಎಂದು ನೇರವಾಗಿ ಟ್ಯೂಶನ್ನಿಗೆ ಹೊರಳಿದ್ದೆ.

ಕಚಗುಳಿ ಅಥವಾ ರೋಮಾಂಚನಗೊಳ್ಳುವ ಸಣ್ಣಪುಟ್ಟ ಪ್ರಕರಣಗಳು ನಮ್ಮಿಬ್ಬರಲ್ಲಿ ನಿಧಾನವಾಗಿ ಬೆಳೆಯುತ್ತಾ ಹೋಗಿ ಒಂದು ಸಂಜೆ ನಾನು 'ಹೋಂ ವರ್ಕ್ ತೆಗಿ' ಎಂದು ಸರೋಜಾಳಿಗೆ ಹೇಳಿದಾಗ, ಅವಳು ನೋಟ್ ಬುಕ್‌ನ ನಡುವೆ ಇದ್ದ ಪುಟ್ಟ ಚೀಟಿಯನ್ನು ಹೊರತೆಗೆದು ನಡುಗುವ ಕೈಯಿಂದ ಅದನ್ನು ನನ್ನಾಚೆ ತಳ್ಳಿದ್ದಳು. ಅದರಲ್ಲಿ 'ಐ ಲವ್ ಯು ಡಿಯರ್' ಎನ್ನುವ ಶಬ್ದಗಳು ಇದ್ದುವು. ನಾನು ಅದನ್ನು ನೋಡಿ ಸುಮ್ಮನೆ ಕಣ್ಣು ಮುಚ್ಚಿದೆ. ಸರೋಜಾಳಿಗೆ ಗಾಬರಿಯಾಯಿತು. ಅವಳು